**2 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**

**ಜೆ.ಎಂ.ಎಫ್.ಸಿ. ನ್ಯಾಯಾಲಯ, ಹುಬ್ಬಳ್ಳಿ.**

**ದಿಃ 27.09.2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಎಂ ಎಸ್ ಹೆಚ್ ವಕೀಲರಿಂದಃ**

ನಾನು ನ್ಯಾಯಾಲಯಕ್ಕೆ ಸಲ್ಲಿಸಿರುವ ಮುಖ್ಯ ವಿಚಾರಣೆಯ ಪ್ರಮಾಣಪತ್ರವನ್ನು ಓದಿ ತಿಳಿದುಕೊಂಡು ಸಹಿ ಮಾಡಿರುತ್ತೇನೆ. ನನ್ನ ಮುಖ್ಯ ವಿಚಾರಣೆಯ ಪ್ರಮಾಣಪತ್ರವನ್ನು ಬರೆಯಲು ಮಾಹಿತಿ ಯಾರು ಕೊಟ್ಟಿದ್ದಾರೆ ಎಂದರೆ ಸಾಕ್ಷಿ ವಕೀಲರು ಕೊಟ್ಟಿದ್ದಾರೆಂದು ನುಡಿಯುತ್ತಾರೆ. ನಾನು ಹೊಸಪೇಟೆಯಲ್ಲಿ ಇರುತ್ತೇನೆ. ನಾನು ಹೊಸಪೇಟೆಯಲ್ಲಿದ್ದು ಈ ಕೇಸಿನ ಪ್ರತಿವಾದಿ ಹುಬ್ಬಳ್ಳಿಯವರಿದ್ದು ನಮ್ಮಿಬ್ಬರ ಒಡನಾಟ ನಾನು ಹೇಳಿದಂತೆ ಎಲ್ಲಿಯೂ ಬಂದಿಲ್ಲ ಎಂದರೆ ಸಾಕ್ಷಿ ಹೌದು ಎನ್ನುತ್ತಾರೆ. 2020 ಮಾರ್ಚ ತಿಂಗಳ ನಂತರ ಕೋವಿಡ್-19 ಪ್ರಯುಕ್ತ ದೇಶದಾದ್ಯಂತ ಯಾವುದೇ ವಾಹನ ಮಾರ್ಗಗಳು ಇರಲಿಲ್ಲ ವಾಹನ ಚಲಿಸುವುದು ಪೂರ್ಣ ಬಂದ್ ಆಗಿತ್ತು ಎಂದರೆ ಸರಿ. 2020 ರ ಜೂನ್ 7 ತಾರೀಕಿನಂದು ನಾನು ಖುದ್ದಾಗಿ ಪ್ರತಿವಾದಿಯನ್ನು ಬಂದು ಭೇಟಿ ಮಾಡಿರುತ್ತೇನೆ ಎಂದು ನನ್ನ ಕಾನೂನು ತಿಳುವಳಿಕೆ ನೋಟೀಸಿನಲ್ಲಿ ಬರೆದುಕೊಂಡಿರುವುದು ಸುಳ್ಳು ಎಂದರೆ ಸಾಕ್ಷಿ ಸರಿಯಲ್ಲ ಎನ್ನುತ್ತಾರೆ. ಸಾಕ್ಷಿಗೆ ಈ ಹಂತದಲ್ಲಿ ದಿಃ 31/08/2020 ರ ಕಾನೂನು ತಿಳುವಳಿಕೆ ನೋಟೀಸ್ ಅಂದರೆ ವಾದಿಯು ದಾವಾ ಪತ್ರ ಪುಟ ಸಂ.3 ರ 5 ನೇ ಸಾಲಿನಲ್ಲಿ ಹೇಳಿರುವ ನೋಟೀಸನ್ನು ಸಾಕ್ಷಿಗೆ ತೋರಿಸಿ ಅದನ್ನು ಬರೆಯಲು ಯಾರು ಮಾಹಿತಿ ಕೊಟ್ಟರು ಎಂದರೆ ಸಾಕ್ಷಿ ನಮ್ಮ ವಕೀಲರು ಎಂದು ನುಡಿದಿದ್ದು ಸದರಿ ದಾಖಲೆಯನ್ನು ನಿಡಿ.1 ಎಂದು ಗುರುತಿಸಲಾಯಿತು. ದಿಃ29/07/2019 ರಂದು ಚೆಕ್ ನಂ.088971 Axis Bank Hospete

Branch ನ್ನು ಪ್ರತಿವಾದಿಗೆ 6 ಲಕ್ಷ ರೂ.ಗಳ ಸಂಬಂಧ ಕೊಟ್ಟಿದ್ದೇನೆ ಎಂದು ತೋರಿಸಲು ನ್ಯಾಯಾಲಯಕ್ಕೆ ದಾಖಲೆ ಹಾಜರಪಡಿಸಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ನಾನು ಯಾವ ಕಾರಣಕ್ಕೆ ಹಾಜರಜಪಡಿಸಿಲ್ಲ ಎಂದರೆ ನಾನು ಸದರಿ 6 ಲಕ್ಷ ರೂ.ಗಳನ್ನು ಸದರಿ ಚೆಕ್ ನ ಮುಖಾಂತರ ಪ್ರತಿವಾದಿಗೆ ನೀಡಿಲ್ಲ ಆ ಕಾರಣಕ್ಕೆ ನಾನು ಹಾಜರಪಡಿಸಿಲ್ಲ ಎಂದರೆ ಸರಿಯಲ್ಲ. ಅದೇ ರೀತಿ ಎರಡು ಲಕ್ಷ ರೂ.ಗಳನ್ನು ಕೂಡ ನಗದಾಗಿ ಪ್ರತಿವಾದಿಗೆ ಕೊಟ್ಟೆ ಎಂದು ನಾನು ಹೇಳುತ್ತಿರುವುದು ಕೂಡ ಸುಳ್ಳು ಎಂದರೆ ಸರಿಯಲ್ಲ. ನಾನು ಆದಾಯ ತೆರಿಗೆ ಪಾವತಿ ಮಾಡುತ್ತೇನೆ ಎಂದರೆ ಸರಿ. ನಾನು ಸುಮಾರು 15-20 ವರ್ಷಗಳಿಂದ ಆದಾಯ ತೆರಿಗೆ ಪಾವತಿ ಮಾಡುತ್ತಿದ್ದೇನೆ. ಆದಾಯ ತೆರಿಗೆ ರಿಟರ್ನ್ಸ್ ನಲ್ಲಿ Cash on hand on that day ಎಂದು ಇರುವುದನ್ನು ಭರ್ತಿ ಮಾಡಬೇಕು ಎಂದರೆ ಸರಿ. 2019-20 ನೇ ಸಾಲಿನಲ್ಲಿ ನನ್ನ ಬಳಿ ಎರಡು ಲಕ್ಷ ರೂ.ಗಳು ನಗದು ಹಣ ಇತ್ತು ಎಂದು ತೋರಿಸಲು ಯಾವುದಾದರೂ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರಪಡಿಸಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ನಾನು ನನ್ನ ಬಳಿ ಹಣ ಇಲ್ಲದಿದ್ದ ಕಾರಣ ಆ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರಪಡಿಸಿಲ್ಲ ಎಂದರೆ ಸಾಕ್ಷಿ ಅದು ಸರಿಯಲ್ಲ ಎನ್ನುತ್ತಾರೆ. ನನ್ನ ಬಳಿ ಹಣ ಇತ್ತು ಅದನ್ನು ಪ್ರತಿವಾದಿಗೆ ಕೊಟ್ಟಿರುತ್ತೇನೆ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಸದರಿ ವ್ಯವಹಾರದ ಸಂಬಂಧ ಪತ್ರಿಕಾ ಪ್ರಕಟಣೆ ಕೊಟ್ಟಿರುವುದಿಲ್ಲ. ನಾನು ಪ್ರತಿವಾದಿಯನ್ನು ದಿಃ 07/06/2020 ರಂದು ಹಾಗೂ 01/08/2020 ರಂದು ಖುದ್ದಾಗಿ ಭೇಟಿಯಾಗಿದ್ದೆ ಎಂದು ಬರೆದುಕೊಂಡಿದ್ದು ಅದು ಸುಳ್ಳು ಆ ಸಮಯದಲ್ಲಿ ಕೋವಿಡ್-19 ಇದ್ದ ಕಾರಣ ನಾನು ಭೇಟಿಯಾಗಲು ಸಾಧ್ಯವೇ ಇರಲಿಲ್ಲ ಎಂದರೆ ಸಾಕ್ಷಿ ಭೇಟಿಯಾಗಿದ್ದೆ ಎನ್ನುತ್ತಾರೆ. ನಾನು ಪ್ರತಿವಾದಿಗೆ ಒಟ್ಟು 8 ಲಕ್ಷ ರೂ.ಗಳನ್ನು ಕೊಟ್ಟಿದ್ದೇನೆಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ

ಸರಿಯಲ್ಲ. ಪ್ರತಿವಾದಿಗೆ ಕೈಗಡ ಹಣಕಾಸಿನ ಸೌಲಭ್ಯ ಬೇಕಾಗಿತ್ತು ಆತ ನನ್ನನ್ನು ಭೇಟಿ ಮಾಡಿ 6 ಲಕ್ಷ ರೂ. ಕೈಗಡ ಹಣ ತೆಗೆದುಕೊಂಡಿದ್ದು ಅದನ್ನು ಒಂದು ವರ್ಷ ಬಿಟ್ಟು 8 ಲಕ್ಷ ರೂ.ಗಳನ್ನು ವಾಪಸ ಕೊಡುತ್ತೇನೆ ಎಂದು ಹೇಳಿದ್ದಕ್ಕೆ ನಾನು ನಿಪಿ.1 ನ್ನು ಮಾಡಿಕೊಡು ಎಂದು ನಾನು ಆ ದಾಖಲೆ ಬರೆಸಿಕೊಂಡಿರುತ್ತೇನೆ ಎಂದರೆ ಸುಳ್ಳು ಎಂದು ನುಡಿಯುತ್ತಾರೆ. ಸಾಕ್ಷಿ ಮುಂದುವರೆದು ಕೈಗಡ ಸಾಲ ಕೊಟ್ಟಿಲ್ಲ ಹೊಲದ ವ್ಯವಹಾರ ಆಗಿದೆ ಎನ್ನುತ್ತಾರೆ. ನಾನು ಕೈಗಡ ಸಾಲ ಕೊಟ್ಟಿರುತ್ತೇನೆ ಹೊರತು ಹೊಲದ ವ್ಯವಹಾರಕ್ಕೆ ಅಲ್ಲ ಎಂದರೆ ಅದು ಸುಳ್ಳು ಎಂದು ಸಾಕ್ಷಿ ನುಡಿಯುತ್ತಾರೆ. ನಾನು ನನ್ನ ಭಾಗದ ನಿರ್ದಿಷ್ಟ ಕರಾರು ನೆರವೇರಿಸಲು ತಯಾರಿದ್ದೇನೆ ಎಂಬುದನ್ನು ತೋರಿಸಲು ನ್ಯಾಯಾಲಯದ ಮುಂದೆ ಯಾವುದಾದರೂ ದಾಖಲೆಗಳನ್ನು ಹಾಜರಪಡಿಸಿದ್ದೀರಾ ಎಂದರೆ ಸಾಕ್ಷಿ ಅದು ಅಗ್ರೀಮೆಂಟ್ ನಲ್ಲಿಯೇ ಇದೆ ಎನ್ನುತ್ತಾರೆ. ನಾನು ಸದರಿ ದಾವಾ ಸಲ್ಲಿಸಲು ಯಾವತ್ತಿಗೂ ವ್ಯಾಜ್ಯ ಕಾರಣ ಉಂಟಾಗಿಲ್ಲ ಆದರೂ ನಾನು ಖೊಟ್ಟಿ ದಾವಾ ಸಲ್ಲಿಸಿ ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿ ಕೈಗಡ ಹಣ ಬೇಕೆಂದು ಕೇಳಿದರೆ ಹೊರತು ದಾಖಲೆ ಬರೆದುಕೊಡುತ್ತೇನೆ ಎಂದು ಹೇಳಿಲ್ಲ ಆದರೂ ಆತನ ಮೇಲೆ ಇಲ್ಲಸಲ್ಲದ ಪ್ರಭಾವ ಬೀರಿ ನಾನು ಆ ದಾಖಲೆಯನ್ನು ಬರೆಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ದಾವಾದಲ್ಲಿ ಕೇಳಿರುವಂತೆ ನಿಪಿ.1 ರ ಪ್ರತಿವಾದಿ ನೊಂದಣಿ ಕ್ರಯ ಪತ್ರ ಮಾಡಿಕೊಡಬೇಕು ಎಂದು ಹೇಳಿದ್ದು ಸದರಿ ಕ್ರಯ ಪತ್ರ ಮಾಡಿಕೊಡುವ ಪ್ರಮೇಯ ಇರುವುದಿಲ್ಲ ನಾನು ಆತನಿಗೆ ಯಾವುದೇ ಹಣ ಕೂಡ ಕೊಟ್ಟಿಲ್ಲ ಎಂದರೆ ಸರಿಯಲ್ಲ. ನಾನು ದಾವಾದಲ್ಲಿ ಕೇಳಿರುವಂತೆ ಪ್ರತಿವಾದಿ ಉಳಿದ ಕ್ರಯದ ಹಣವನ್ನು ಪಡೆದು ನೊಂದಣಿ ಕ್ರಯ ಪತ್ರ ಬರೆದುಕೊಡಬೇಕು ಎಂದು ಕೇಳಿದ್ದು ಅದನ್ನು ಪಡೆಯಲು ನಾನು ಅರ್ಹನಲ್ಲ ಎಂದರೆ ಸರಿಯಲ್ಲ. ಈ

ಪ್ರಕರಣದಲ್ಲಿ ನನಗೆ ಯಾವುದೇ ಖುದ್ದು ಮಾಹಿತಿ ಇಲ್ಲದಿದ್ದರೂ ಸುಳ್ಳು ದಾವಾ ಸಲ್ಲಿಸಿ ಸುಳ್ಳು ದಾಖಲೆಗಳನ್ನು ಸೃಷ್ಟಿ ಮಾಡಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ.1 ರಲ್ಲಿರುವ ಪ್ರತಿವಾದಿಯ ಸಹಿಗಳು ಜಮೀನು ವ್ಯವಹಾರದ ಬಗ್ಗೆ ಸಂಬಂಧಿಸಿದ ಸಹಿಗಳಲ್ಲ ಅವುಗಳು ಕೇವಲ ಕೈಗಡ ಸಾಲಕ್ಕೆ ಸಂಬಂಧಿಸಿದ ಸಹಿಗಳು ಎಂದರೆ ಅದು ಸರಿಯಲ್ಲ ಎನ್ನುತ್ತಾರೆ.

**ಮರುವಿಚಾರಣೆ ಇಲ್ಲ.**

(ನನ್ನ ಉಕ್ತಲೇಖದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೆ ಸರಿ ಇದೆ.

Sd/-

**2 ನೇ ಅಧಿಕ ಹಿ.ದಿ.ನ್ಯಾ.ಹುಬ್ಬಳ್ಳಿ.**